# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪಸಿಂಹ ನಾಯಕ್.ಕೆ ರವರು 73 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

----

**ವಿಷಯ:**

ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕಿನ ಬಡಗಕಾರಂದೂರು ಗ್ರಾಮದ ಕಟ್ಟೂರು ಸನಿಹ ಫಲ್ಗುಣಿ ನದಿಯು ಹರಿಯುತ್ತಿದ್ದು, ಅಲ್ಲಿನ ಬಾವಲಿಗುಂಡಿ ಎಂಬಲ್ಲಿ ಸುಮಾರು ನೂರು ವರ್ಷಗಳ ಹಿಂದೆ ಕಟ್ಟಿದ ಕಿರುಕಟ್ಟ (ಅಣೆಕಟ್ಟು) ಇದೆ. ಅಲ್ಲಿಂದ ಸುಮಾರು 3 ಕಿ.ಮೀ ಗೂ ಅಧಿಕ ದೂರಕ್ಕೆ ತೋಡಿನ ಅಂದರೆ ಕಾಲುವೆಯ ಮೂಲಕ ನಾಲ್ಕೂರು ಗ್ರಾಮದ ಸೂಳಬೆಟ್ಟು ವಾಳ್ಯಕ್ಕೆ ನೀರು ಹರಿದು ಬರುವ ವ್ಯವಸ್ಥೆ ಇದೆ. ಆದರೆ ಸದರಿ ನೀರು ಹರಿದು ಬರುವ ವ್ಯವಸ್ಥೆ ಪ್ರಕೃತಿ ವಿಕೋಪದಿಂದಾಗಿ ಕಳೆದ 10 ವರ್ಷಗಳಿಂದ ಅವ್ಯವಸ್ಥೆಗೊಂಡಿದ್ದು, ನೀರು ಹರಿದು ಬರುವುದು ಸ್ಥಗಿತಗೊಂಡಿದೆ.

ಬಾವಲಿಗುಂಡಿಯಲ್ಲಿರುವ ಕಿಂಡಿ ಅಣೆಕಟ್ಟು ಇರುವಲ್ಲಿಂದ ಸೂಳಬೆಟ್ಟು ವಾಳ್ಯದ ತನಕ ಸುಮಾರು 2 ಕಿ.ಮೀ ನಷ್ಟು ಉದ್ದದ ಕಾಲುವೆ ಇದುವರೆವಿಗೂ ಸುಸಜ್ಜಿತವಾಗಿ ಮರು ನಿರ್ಮಾಣವಾಗದೇ ಇರುವುದರಿಂದ ಸೂಳಬೆಟ್ಟು ವಾಳ್ಯದ ಗ್ರಾಮಸ್ಥರಿಗೆ ಆಗಿರುವ ಗಂಭೀರ ತೊಂದರೆ ಕುರಿತು.

**ಉತ್ತರ:**

ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲೂಕಿನ ಬಡಗಕಾರಂದೂರು ಗ್ರಾಮದ ಕಟ್ಟೂರು ಸನಿಹ ಫಲ್ಗುಣಿ ನದಿಯ ಹರಿಯುತ್ತಿದ್ದು, ಅಲ್ಲಿನ ಬಾವಲಿಗುಂಡಿ ಎಂಬಲ್ಲಿ ರೈತರು ಸುಮಾರು ವರ್ಷಗಳಿಂದ ಮಣ್ಣಿನ ಕಟ್ಟವನ್ನು ಕಟ್ಟಿ ಸದರಿ ಕಟ್ಟದಿಂದ ನೀರನ್ನು ಕೃಷಿ ಜಮೀನುಗಳಿಗೆ ಉಪಯೋಗಿಸುತ್ತಿರುತ್ತಾರೆ.

ಸದರಿ ಸ್ಥಳದಲ್ಲಿ 2015–16ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕಿಂಡಿ ಅಣೆಕಟ್ಟನ್ನು ನಿರ್ಮಿಸಲಾಗಿರುತ್ತದೆ. ಸದರಿ ಕಿಂಡಿ ಅಣೆಕಟ್ಟಿನ ಕೆಳಭಾಗದ ಬಲದಂಡೆಯಲ್ಲಿ ಸುಮಾರು 3.00 ಕಿ.ಮೀ. ವರೆಗಿನ ನೈಸರ್ಗಿಕವಾದ ಕಾಲುವೆ ಇದ್ದು, ಸದರಿ ಕಾಲುವೆಯಲ್ಲಿ ಸುಮಾರು 2.00 ಕಿ.ಮೀ. ನಷ್ಟು ಕಾಲುವೆಯು ಫಲ್ಗುಣಿ ನದಿಗೆ ಹೊಂದಿಕೊಂಡು ಇರುತ್ತದೆ. ಸದರಿ ಕಾಲುವೆಯ ದಂಡೆಗಳು ಕುಸಿದು ಬಿದ್ದು, ಕಾಲುವೆಯಲ್ಲಿ ನೀರು ಹರಿಯದೆ ಕೃಷಿ ಚಟುವಟಿಕೆಗಳಿಗೆ ತೊಂದರೆ ಉಂಟಾಗುತ್ತದೆ.

ಸದರಿ ಕಾಲುವೆಯನ್ನು ಸುಮಾರು 2.00 ಕಿ.ಮೀ. ವರೆಗೆ ಅಭಿವೃದ್ಧಿಗೊಳಿಸಿದಲ್ಲಿ ಪಕ್ಕದ ನಾಲ್ಕೂರು, ಬಡಗಕಾರಂದೂರು ಮತ್ತು ಬಳಂಜ ಗ್ರಾಮಗಳ ಸುಮಾರು 100.00 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದ್ದು, ಕಾಲುವೆಯನ್ನು ಅಭಿವೃದ್ಧಿಪಡಿಸಲು ಸುಮಾರು ರೂ.300.00ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ. ಅನುದಾನ ಲಭ್ಯತೆಯನುಸಾರ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

**ಸಂಖ್ಯೆ:ಎಂಐಡಿ 3\43 ವಿಪವಿ 2024**

(ಎನ್.ಎಸ್.ಭೋಸ್‌ರಾಜ್)
ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು